**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

**ಸವಣೂರು.**

ಅಪರಾಧ ಸಂಖ್ಯೆ: 297/2016

ಪಿಡಬ್ಲ್ಯೂಃ 02 ಸಿಡಬ್ಲ್ಯೂ ಃ 01
ದಿನಾಂಕಃ 25-06-2019
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಡಾಃ ಭಾಗಿರಥಿ ಮೆಡ್ಲೇರಿ |
| ತಂದೆ ಹೆಸರು | - ನಿಂಗಪ್ಪ |
| ವಯಸ್ಸು | - 50 ವರ್ಷಗಳು |
| ಉದ್ಯೋಗ | - ಮುಖ್ಯ ವೈದ್ಯಾಧಿಕಾರಿಗಳು ತಾಲೂಕಾ ಆಸ್ಪತ್ರೆ |
| ವಾಸ ಸ್ಥಳ | - ಕುಂದಗೋಳ ಜಿಲ್ಲಾ ಧಾರವಾಡ |

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.

ದಿನಾಂಕಃ 20.07.2013 ರಿಂದ ಮಾರ್ಚ 2017 ರವರೆಗೆ ಹಾವೇರಿ ಜಿಲ್ಲೆಯಲ್ಲಿ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನು ಸದರಿ ಅವಧಿಯಲ್ಲಿ ದಿನಾಂಕಃ 09.07.2015 ರಂದು ಪ್ರಭಾರ ಜಿಲ್ಲಾ ಆರೋಗ್ಯ ಅಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿದ್ದೆನೆ.

ದಿನಾಂಕಃ 09.07.2015 ರಂದು ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಚಾಸಾ-4 ಮತ್ತು 5 ರವರು ದೂರವಾಣಿ ಮೂಲಕ ನನ್ನನ್ನು ಸಂಪರ್ಕಿಸಿ ಸವಣೂರಿನ ಲಾಲಸಾ ಕಟ್ಟೆಯಲ್ಲಿ ಅನಧಿಕೃತವಾಗಿ ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿದ್ದಾರೆ ಎಂದು ಹಾಗೂ ಸಾರ್ವಜನಿಕರಿಂದ ದೂರುಗಳು ಬಂದಿದ್ದು ತಕ್ಷಣ ಸ್ಥಳಕ್ಕೆ ಬರುವಂತೆ ನನಗೆ ದೂರವಾಣಿ ಮೂಲಕ ಸೂಚಿಸಿದರು. ನಂತರ ನಾನು ಹಾವೇರಿಯಿಂದ ಸವಣೂರಿನ ತಾಲೂಕಾ ಆಸ್ಪತ್ರೆಗೆ ಹಾಗೂ ಉಪ ವಿಭಾಗಾಧಿಕಾರಿ ಕಚೇರಿಗೆ ಬೆಳಿಗ್ಗೆ ಸುಮಾರು 11.40 ರ ವೇಳೆಗೆ ಭೇಟಿಯಾಗಿ ಈ ವಿಷಯದ ಬಗ್ಗೆ ಚಾಸಾ-4 ಮತ್ತು 5 ರವರ ಬಳಿ ಚರ್ಚಿಸಿದೆವು. ಆಪಾದನೆ ಬಂದ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಧಿಕಾರಿಗಳಿಗೆ ಮಾತ್ರ ಅನಧೀಕೃತವಾಗಿ ವೈದ್ಯಕೀಯ ವೃತ್ತಿ ಮಾಡುವವರ ವಿರುದ್ಧ KPME ಕಾಯ್ದೆ ಅಡಿ ಪ್ರಕರಣ ದಾಖಲಿಸಲು ಅಧಿಕಾರ ಇರುವುದರಿಂದ ನಾನು, ಚಾಸಾ-4 ರಿಂದ 8 ಸೇರಿ ಲಾಲಸಾ ಕಟ್ಟೆಯಲ್ಲಿರುವ ಡಾಃ ಸಲೀಂ ಅಹಮ್ಮದ ರವರ ಕ್ಲಿನಿಕ್ ಗೆ ಮಧ್ಯಾಹ್ನ 12.00 ಗಂಟೆಗೆ ಹೋಗಿ ದಾಳಿ ಮಾಡಿದೆವು. ಹಾಗೂ ನಮ್ಮ ಜೊತೆಗೆ ಇಬ್ಬರು ಪಂಚರನ್ನು ಹಾಗೂ ಪೋಲಿಸರನ್ನು ಕರೆದುಕೊಂಡು ಹೋಗಿದ್ದೆವು. ಸದರಿ ಕ್ಲಿನಿಕ್ ನಲ್ಲಿ ಚಾಸಾ-9 ರವರು ಮತ್ತು ಕೆಲವು ರೋಗಿಗಳು ಹಾಗೂ ಆರೋಪಿ ಇದ್ದರು. ನಾನು ಹಾಗೂ ಚಾಸಾ-4 ರವರು ಆಪಾದಿತನನ್ನು ವೈದ್ಯಕೀಯ ವೃತ್ತಿ ನಡೆಸಲು ಪರವಾನಿಗೆ ಅಥವಾ ಪ್ರಮಾಣ ಪತ್ರ ಕೊಟ್ಟ ಬಗ್ಗೆ ವಿಚಾರಿಸಲು ಅದಕ್ಕೆ ಆರೋಪಿ ವೈದ್ಯಕೀಯ ಪ್ರಮಾಣ ಪತ್ರ ಇಲ್ಲ ಹಾಗೂ KPME ಕಾಯ್ದೆ ಅಡಿಯಲ್ಲಿ ತಾನು ನೊಂದಣೆ ಮಾಡಿಸಿರುವುದಿಲ್ಲ ಎಂದು ತಿಳಿಸಿದನು. ತಾನು ನ್ಯಾಚುರೋಪತಿ ಓದಿದ್ದು ಚಾಸಾ-9 ರವರು ತನ್ನ ಕ್ಲಿನಿಕ್ ನಲ್ಲಿ ವೈದ್ಯಕೀಯ ವೃತ್ತಿ ಮಾಡುತ್ತಾರೆಂದು ತಿಳಿಸಿದರು. ನಂತರ ಚಾಸಾ-9 ರವರನ್ನು ಭೇಟಿಯಾಗಿ ಸದರಿ ಕ್ಲಿನಿಕ್ ನಲ್ಲಿ ವೈದ್ಯಕೀಯ ವೃತ್ತಿ ನಡೆಸುತ್ತಿರುವ ಬಗ್ಗೆ ವಿಚಾರಿಸಿದಾಗ ಅದಕ್ಕೆ

ಅವರು ತಾವು ಸದರಿ ಕ್ಲಿನಿಕ್ ನಲ್ಲಿ ವೈದ್ಯಕೀಯ ವೃತ್ತಿ ಮಾಡುತ್ತಿಲ್ಲ ಎಂದು ಹಾಗೂ ತಮಗೂ ಸದರಿ ಕ್ಲಿನಿಕ್‌ಗೂ ಯಾವುದೇ ಸಂಬಂಧ ಇಲ್ಲ ಎಂದು ತಿಳಿಸಿದರು. ನಾವೆಲ್ಲರೂ ಸದರಿ ಕ್ಲಿನಿಕ್ ನಲ್ಲಿ ಒಳಗೆ ಹೋಗಿ ಪರಿಶೀಲಿಸಲು ಅಲ್ಲಿ 3 ಕೋಣೆಗಳು ಇದ್ದವು. ಒಂದು ಕೋಣೆಯಲ್ಲಿ ಪಿಠೋಪಕರಣಗಳು, ಇನ್ನೊಂದು ರೂಮಿನಲ್ಲಿ ಔಷಧಿ ಹಾಗೂ ಲ್ಯಾಬೋರೆಟರಿ ಇದ್ದು, ಮತ್ತೊಂದು ರೂಮಿನಲ್ಲಿ ಸ್ಟೋರೇಜ್ ಮಾಡಲು ಬಳಸುತ್ತಿದ್ದರು. ಪಿಠೋಪಕರಣ ಇದ್ದ ರೂಮಿನಲ್ಲಿ ರೋಗಿಗಳನ್ನು ತಪಾಸಣೆ ಮಾಡಲು ವ್ಯವಸ್ಥೆ ಇತ್ತು. ಸಿಕ್ಕ ಔಷಧಿಗಳಲ್ಲಿ ಪರಿಶೀಲಿಸಲಾಗಿ ಅವುಗಳಲ್ಲಿ 48 ವಿವಿಧ ಔಷಧಿಗಳು ಹಾಗೂ ವೈದ್ಯಕೀಯ ಲ್ಯಾಬಗೆ ಬಳಸುವಂತಹ ದ್ರವಗಳು ಇದ್ದವು. ನಂತರ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಅವುಗಳನ್ನೆಲ್ಲಾ ಜಪ್ತಪಡಿಸಿಕೊಂಡು ಪ್ರತ್ಯೇಕವಾಗಿ ಸೀಲು ಮಾಡಿದ್ದೇವೆ. ದೊರೆತ ಔಷಧಿಗಳಿಗೂ ಆರೋಪಿಯ ವ್ಯಾಸಂಗಕ್ಕೂ ವೃತ್ತಿ ಮಾಡಲು ಅವಕಾಶ ಇರುವುದಿಲ್ಲ. ಸದರಿಯವರು ನಕಲಿ ವೈದ್ಯರೆಂದು ಕಂಡು ಬಂದಿದ್ದದ್ದು ಹಾಗೂ ಜನರಿಗೆ ವೈದ್ಯರೆಂದು ನಂಬಿಸಿ ಮೋಸ ಮಾಡುತ್ತಿದ್ದು ಆದ್ದರಿಂದ ಆರೋಪಿಯ ವಿರುದ್ಧ KPME ಕಾಯ್ದೆ ಅಡಿಯಲ್ಲಿ ಠಾಣೆಗೆ ದೂರನ್ನು ನೀಡಿದ್ದೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ನಿಪಿ-2 ಎಂದು, ಹಾಗೂ ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಆ ದಿನ ಆರೋಪಿಯ ಕ್ಲಿನಿಕ್ ನಲ್ಲಿ ಜಪ್ತಪಡಿಸಿಕೊಂಡ ಔಷಧಿಗಳನ್ನು ಹಾಗೂ ಲ್ಯಾಬ್ ಕೆಮಿಕಲ್ಸಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 48 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಆ ದಿನ ನಕಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದರು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ದಿನಾಂಕಃ 09.07.2015 ರಂದು ನಾನು ಯಾವುದೇ ಟೂರು ಪ್ರೊಗ್ರಾಮ ನ್ನು ಮಾಡಿಲ್ಲ. ದಿನಾಂಕಃ 09.07.2015 ರಂದು ಪಂಚನಾಮೆ ಮಾಡಿದ ನಂತರ ನಾನು ದೂರನ್ನು ಸಲ್ಲಿಸಿದ್ದೇನೆ. ಘಟನೆಯ ಮರುದಿನ ಡಿಹೆಚ್ಓ ಇವರಿಗೆ ನನ್ನ ಚಾರ್ಜನ್ನು ವಹಿಸಿದ್ದೇನೆ. ಅದನ್ನು ಹೊರತು ಬೇರೆ ಏನನ್ನೂ ಮಾಡಿಲ್ಲ. ಸಾಮಾನ್ಯವಾಗಿ ವೈದ್ಯಕೀಯ ವೃತ್ತಿ ನಡೆಸುವವರ ಡಿಹೆಚ್ಓ ಇವರ ಬಳಿ ವೃತ್ತಿ ನಡೆಸುವ ಕುರಿತು ನೊಂದಣಿ ಮಾಡಿಸಿಕೊಂಡಿರುತ್ತಾರೆ. ಸದರಿ ನೊಂದಣಿ ವಹಿ ಡಿಹೆಚ್ಓ ಇವರ ಬಳಿ ಇರುತ್ತದೆ ಅಂದರೆ ಸರಿ. ಯಾರಾದರೂ ನೊಂದಣಿ ಇಲ್ಲದೇ ವೈದ್ಯಕೀಯ ವೃತ್ತಿ ನಡೆಸುತ್ತಾರೆಂದು ದೂರು ಬಂದರೆ ನೊಂದಣಿ ರಿಜಿಸ್ಟರ್ ನಲ್ಲಿ ನೋಡಿದರೆ ಕಂಡು ಹಿಡಿಯಬಹುದು ಅಂದರೆ ಸರಿ. ನಾನು ಸವಣೂರಿಗೆ ಬರುವ ಮೊದಲು ಡಿಹೆಚ್ಓ ಇವರ ಬಳಿ ಇದ್ದ ರಿಜಿಸ್ಟರನ್ನು ಪರಿಶೀಲನೆ ಮಾಡಿಲ್ಲ ಅಂದರೆ ಸರಿ. KPME ಕಾಯ್ದೆ ಅಡಿಯಲ್ಲಿ ನೊಂದಣಿಯಾದ ಕ್ಲಿನಿಕ್ ನ ಮೇಲೆ ರೇಡ್ ಮಾಡಬಾರದು ಅಂದರೆ ಸರಿ. ಸದರಿ ಕ್ಲಿನಿಕ್ ಮೇಲೆ ರೇಡ್ ಮಾಡಿದ್ದಲ್ಲಿ ಅವಮಾನ ಆಗುತ್ತದೆ ಮತ್ತು ಅದು ಕ್ರಿಮಿನಲ್ ಅಪರಾಧ ಆಗುತ್ತದೆ ಅಂದರೆ ಸರಿಯಲ್ಲ ಆ ದಿನ ನಾವು ಆರೋಪಿಯ ಕ್ಲಿನಿಕ್ ಗೆ ಭೇಟಿ ನೀಡಿದಾಗ KPME ರಿಜಿಸ್ಟೇರೆಷನ್ ಸರ್ಟಿಪಿಕೆಟನ್ನು ಆರೋಪಿ ಕ್ಲಿನಿಕ್ ನಲ್ಲಿ ತೂಗು ಹಾಕಿರಲಿಲ್ಲ/ತೋರುವಂತೆ ಹಾಕಿರಲಿಲ್ಲ. ಸದರಿ ವಿಷಯವನ್ನು ನಿಮ್ಮ ದೂರಿನಲ್ಲಿ ಕಾಣಿಸಿದ್ದಿರೀ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆರೋಪಿ ಸ್ವತಃ ನೊಂದಣಿ ಮಾಡಿಸಿರುವುದಿಲ್ಲ ಎಂದು ಹೇಳಿದ್ದರಿಂದ ದೂರಿನಲ್ಲಿ ಬರೆದಿಲ್ಲ ಎಂದು

ನುಡಿಯುವರು. ಸಾಮಾನ್ಯವಾಗಿ ಒಂದು ಕ್ಲಿನಿಕ್ ನೊಂದಣಿ ಯಾಗುವುದಕ್ಕಿಂತ ಪೂರ್ವದಲ್ಲಿ ಡಿಹೆಚ್‌ಓ, ಟಿಹೆಚ್‌ಓ, ಪೋಲಿಸರು  ಬಂದು ಭೇಟಿ ನೀಡಿ ಪರೀಶಿಲನೆ ಮಾಡುತ್ತಾರೆಂದರೆ ಸರಿ.  ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

**ಓ. ಹೆ. ಕೆ. ಸರಿ ಅದೆ.**

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.